ದಿ.29.07.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ ಃ ಶ್ರೀ ಜೆ.ಎಚ್. ವಕೀಲರಿಂದ ವಾದಿಯ ಪರವಾಗಿ :

10. ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಗೆ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿವೆ ಮತ್ತು ಸತ್ಯವಾಗಿವೆ. ಅದಕ್ಕೆ ಸಹಿ ಮಾಡಿರುತ್ತೇನೆ.

11. ದೊಣ್ಣೆಹಳ್ಳಿ ಗ್ರಾಮ ಪಂಚಾಯತಿಗೆ ನಾನು ಸಾಮಗ್ರಿಗಳನ್ನು ಪೂರೈಕೆ ಮಾಡಿದ ಬಗ್ಗೆ 13 ಬಿಲ್ಲುಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-13 ಎಂದು ಗುರುತಿಲಾಯಿತು. ನಾನು ಪ್ರತಿವಾದಿಯರಿಗೆ ನನ್ನ ಹಣ ವಾಪಸ್ಸಾತಿಗಾಗಿ ಕೊಟ್ಟ ಎರಡು ಪತ್ರಗಳ ಕಾರ್ಬನ್ ಪ್ರತಿಗಳ ಮೇಲೆ ಪ್ರತಿವಾದಿಯರ ಹಿಂಬರಹಗಳಿವೆ. ಆ ಎರಡೂ ಪತ್ರಗಳನ್ನು ಕ್ರಮವಾಗಿ ನಿ.ಪಿ-14 ಮತ್ತು ನಿಪಿ-15 ಎಂದು ಗುರುತಿಸಲಾಯಿತು. ಪ್ರತಿವಾದಿಯರಿಗೆ ಕಳುಹಿಸಿದ್ದ ನೋಟೀಸಿನ ಪ್ರತಿಯನ್ನು ನಿಪಿ-16 ಎಂದು, ಅವುಗಳು ಅವರಿಗೆ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿ ಪತ್ರಗಳನ್ನು ನಿ.ಪಿ-17 ಮತ್ತು ನಿಪಿ-18 ಎಂದು ಗುರುತಿಸಲಾಯಿತು. ಸದರಿ ನೋಟೀಸಿನ ಕಛೇರಿ ಪ್ರತಿಯನ್ನು ಇ.ಓ. ಮತ್ತು ಸಿ.ಇ.ಓ. ರವರಿಗೆ ಕಳುಹಿಸಿರುತ್ತೇನೆ. ಆ ಬಗ್ಗೆ ಎರಡು ಅಂಚೆ ಸ್ವೀಕೃತಿ ಪತ್ರಗಳನ್ನು ನಿಪಿ-19 ಮತ್ತು ನಿಪಿ-20 ಎಂದು ಗುರುತಿಸಲಾಯಿತು. PIMS 21/2020 ರಲ್ಲಿ ಆಗಿರುವ ಮಧ್ಯಸ್ಥಿಕೆ ಪ್ರಾರಂಭವಾಗದಿರುವ ವರದಿಯನ್ನು ನಿಪಿ-21 ಎಂದು ಗುರುತಿಸಲಾಯಿತು.

( ಮುಂದುವರಿದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ
ನ್ಯಾಯಾಧೀಶರು, ದಾವಣಗೆರೆ.

ದಿ.16.02.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ ಃ ಶ್ರೀ ಜೆ.ಎಚ್. ವಕೀಲರ ಪರ ಶ್ರೀ ವಿ.ಕೆ.ಎಂ. ವಕೀಲರಿಂದ ವಾದಿಯ ಪರವಾಗಿ :

11. ಈ ಕೆಳಕಂಡ ದಾಖಲೆಗಳನ್ನು ಈ ದಿನ ನಿಶಾನೆಯಾಗಿ ಗುರುತಿಸಲಾಯಿತು.

* Bill No.18 given by plaintiff to the defendant – Ex.P.22. (Rs.97,768/-)
* Bill No.37 given by plaintiff to the defendant – Ex.P.23. (Rs.88,463/-)
* Bill No.38 given by plaintiff to the defendant – Ex.P.24. (Rs.75,536/-)
* Bill No.39 given by plaintiff to the defendant – Ex.P.25. (Rs.25,000/-)
* Bill No.41 given by plaintiff to the defendant – Ex.P.26. (Rs.62,690/-)
* Bill No.48 given by plaintiff to the defendant – Ex.P.27. (Rs.98,514/-)
* Bill No.54 given by plaintiff to the defendant – Ex.P.28. (Rs.81,414/-)

ಪಾಟೀ ಸವಾಲು ಃ ಶ್ರೀ ವೈ.ಎಚ್. ವಕೀಲರಿಂದ ಪ್ರತಿವಾದಿಯ ಪರವಾಗಿ ಃ

ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರು. ಆದ್ದರಿಂದ, ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ
ನ್ಯಾಯಾಧೀಶರು, ದಾವಣಗೆರೆ.

ದಿ.09.03.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯಿತು.

ಪಾಟೀ ಸವಾಲು ಃ ಶ್ರೀ ವೈ.ಎಚ್. ವಕೀಲರಿಂದ ಪ್ರತಿವಾದಿಯ ಪರವಾಗಿ ಃ ಈ ದಿನ ಸಾಕ್ಷಿಯು ಹಾಜರಿದ್ದು, ಈ ಪ್ರಕರಣವನ್ನು ಎರಡು ಬಾರಿ ಕೂಗಿಸಲಾಗಿ, ಪ್ರತಿವಾದಿ ಹಾಗೂ ವಕೀಲರು ಗೈರು ಹಾಜರಿ ಇದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.

ದಿ.29.05.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯಿತು. (ದಿ.29.02.2024 ರಂದು ಮಧ್ಯಂತರ ಅರ್ಜಿಯ ಮೇಲೆಆದೇಶದ ಮೇರೆಗೆ )

ಪಾಟೀ ಸವಾಲು ಃ ಶ್ರೀ ವೈ.ಎಚ್. ವಕೀಲರಿಂದ ಪ್ರತಿವಾದಿಯ ಪರವಾಗಿ ಃ

12. 1994 ರಿಂದ ನಾನು ವಿದ್ಯುಚ್ಛಕ್ತಿ ಮತ್ತು ಪಂಪ್ ಸೆಟ್ ಉಪಕರಣಗಳ ಪೂರೈಕೆಯ ವ್ಯವಹಾರ ಮಾಡುತ್ತಿದ್ದೇನೆ. ನಾನು ಉನ್ನತಿ ಸಬ್ ಮರ್ಸಿಬಲ್ ಪಂಪ್ ಸೆಟ್ ಅಧಿಕೃತ ಡೀಲರ್ ಹಾಗೂ ಸಿಸ್ಕಾ ಬಲ್ಬ ನ ಅಧಿಕೃತ ಡೀಲರ್ ಆಗಿದ್ದೇನೆ.

13. ಪ್ರಸ್ತುತ ಪ್ರಕರಣವನ್ನು ದೊಣ್ಣೆಹಳ್ಳಿ ಗ್ರಾಮ ಪಂಚಾಯತಿಯ ಪಿ.ಡಿ.ಓ. ಮತ್ತು ಅಧ್ಯಕ್ಷರ ಮೇಲೆ ದಾಖಲಿಸಿರುತ್ತೇನೆ. ಪ್ರತಿವಾದಿಗಳು ನನಗೆ ಕೋರಿಕೆಯ ಕೊಟ್ಟ ನಂತರ ನಾನು ಪ್ರತಿವಾದಿಗಳಿಗೆ ನಿರ್ದಿಷ್ಟ ಕಂಪನಿಯ ಸಾಮಗ್ರಿಗಳ ದರಪಟ್ಟಿಯನ್ನು ಕಳುಹಿಸಿಕೊಟ್ಟಿದ್ದೇನೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ.

14. ನಾನು ದರಪಟ್ಟಿಯನ್ನು ಪ್ರತಿವಾದಿಗಳಿಗೆ ಕಳುಹಿಸಿದ ನಂತರ ಪ್ರತಿವಾದಿಗಳು ಸದರಿ ದರಪಟ್ಟಿಯನ್ನು ಒಪ್ಪಿಕೊಂಡು ಇಂತಿಂತಹ ಸಾಮಗ್ರಿಗಳನ್ನು ಕಳುಹಿಸಿ ಕೊಡಿ ಎಂದು ನನಗೆ ಕೋರಿಕೆ ಪತ್ರ ಕಳುಹಿಸಿಲ್ಲ. ಸದರಿ ಕೋರಿಕೆ ಪತ್ರವನ್ನು ಪ್ರತಿವಾದಿಗಳು ಕಳುಹಿಸಿದ ನಂತರ ನಾನು ಪ್ರತಿವಾದಿಗಳಿಗೆ ಸಾಮಗ್ರಿಗಳನ್ನು ಕಳುಹಿಸಿದ ಬಗ್ಗೆ ಡೆಲಿವರಿ ನೋಟ್ ಕಳುಹಿಸಿದ್ದೀರಾ ಎಂದರೆ ಸಾಕ್ಷಿಯು ಡೆಲಿವರಿ ನೋಟನ್ನು ಕಳುಹಿಸಿಲ್ಲ ಎಂದು ಹೇಳುತ್ತಾರೆ.

15. ನಿಪಿ-22 ರಿಂದ ನಿಪಿ-28 ರವರೆಗಿನ ದಾಖಲೆಗಳ ಪ್ರಕಾರ ಪ್ರತಿವಾದಿಗಳಿಗೆ ಯಾವುದೇ ಸಾಮಗ್ರಿಗಳನ್ನು ತಲುಪಿಲ್ಲ ಎಂದರೆ ಸರಿಯಲ್ಲ. ನಿಪಿ-22 ರಿಂದ ನಿಪಿ-28 ರ ವರೆಗಿನ ದಾಖಲೆಗಳನ್ನು ಹೊರತುಪಡಿಸಿ, ಸಾಮಗ್ರಿಗಳನ್ನು ಪ್ರತಿವಾದಿಗಳಿಗೆ ಕಳುಹಿಸಿದ ಬಗ್ಗೆ ಬೇರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ.

16. ನಿಪಿ-22 ಎಂದು ಗುರುತಿಸಲಾದ ಬಿಲ್ಲಿನಲ್ಲಿ ಸಾಮಗ್ರಿಗಳ ವಿವರಗಳನ್ನು (ಯಾವ ಕಂಪನಿಗೆ ಸೇರಿದ್ದು, ಯಾವ ವರ್ಷದಲ್ಲಿ ತಯಾರಾಗಿದ್ದು ಎಂದು) ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಪಿ-22 ರ ಪ್ರಕಾರ ಒಟ್ಟು ರೂ.97,768/- ನಮೂದಿಸಿದ್ದು, ಈ ಹಣಕ್ಕೆ SGST ಮತ್ತು CGST ಕೊಟ್ಟಿಲ್ಲ ಎಂದರೆ ಸರಿಯಲ್ಲ. SGST ಮತ್ತು CGST ನ್ನು ಕೇವಲ ಶೇಕಡ 9 ಮತ್ತು ಶೇಕಡ 9 ಎಂದು ನನ್ನ ಇಷ್ಟದಂತೆ ತೋರಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-22 ರಿಂದ ನಿಪಿ-28 ರ ಬಿಲ್ಲುಗಳು ಬೋಗಸ್ ಬಿಲ್ಲುಗಳು ಎಂದರೆ ಸರಿಯಲ್ಲ.

17. ಪ್ರತಿವಾದಿಗಳ ಒಪ್ಪಿಗೆ ಪಡೆದು ನಾನು ಯಾವುದೇ ಸಾಮಗ್ರಿಗಳನ್ನು ಸರಬರಾಜು ಮಾಡಿಲ್ಲ ಎಂದರೆ ಸರಿಯಲ್ಲ. ಸಾಮಗ್ರಿಗಳನ್ನು ಸಂಬಂಧಪಟ್ಟ ಗ್ರಾಮಪಂಚಾಯತಿಗೆ (ಪ್ರತಿವಾದಿಗಳಿಗೆ) ಸರಬರಾಜು ಮಾಡಿದ ಬಗ್ಗೆ ಯಾವುದೇ ದಾಖಲಾತಿಗಳು ಇಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದಿನ ಪಾಟೀ ಸವಾಲನ್ನು ಮಾಡಲು ವಕೀಲರು ಕಾಲಾವಕಾಶ ಕೋರಿದ್ದರಿಂದ, ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.

ದಿ.14.06.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯಿತು. (ದಿ.29.02.2024 ರಂದು ಮಧ್ಯಂತರ ಅರ್ಜಿಯ ಮೇಲೆಆದೇಶದ ಮೇರೆಗೆ)

ಮುಂದುವರಿದ ಪಾಟೀ ಸವಾಲು ಃಶ್ರೀ ವೈ.ಎಚ್. ವಕೀಲರಿಂದ ಪ್ರತಿವಾದಿಯ ಪರವಾಗಿ :

18. ಪ್ರತಿವಾದಿಗಳಿಂದ ರೂ.4,54,474/- ಗಳು ಬರಬೇಕು ಎಂದು ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯವಿಚಾರಣೆಯಲ್ಲಿ ಹೇಳಿದ್ದು, ಸದರಿ ಹಣ ಎಷ್ಟು ವರ್ಷಗಳ ಬಾಪ್ತು ಎಂದು ಕೇಳಿದ್ದಕ್ಕೆ ಸಾಕ್ಷಿಯು ಅಕ್ಟೋಬರ್-2019 ರಿಂದ ಡಿಸೆಂಬರ್-2019 ಮೂರು ತಿಂಗಳ ಅವಧಿಯದೆಂದು ಹೇಳುತ್ತಾರೆ.

19. ಮೂರು ತಿಂಗಳ ಅವಧಿಯ ಬಾಕಿ ಹಣ ರೂ.4,54,474/- ಬರಬೇಕು ಎಂದು ಪ್ರತಿವಾದಿಗಳಿಗೆ ನನ್ನ ವಕೀಲರ ಮೂಲಕ ನೋಟೀಸು ಕಳುಹಿಸಿರುತ್ತೇನೆ. ಸದರಿ ನೋಟೀಸಿನ ನಕಲನ್ನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ.

20. ನಿಪಿ.22 ರಿಂದ ನಿಪಿ.28 ರಂತೆ ಬಿಲ್ಲುಗಳನ್ನು ಇಲ್ಲಿ ಹಾಜರುಪಡಿಸಿದ್ದು, ಸದರಿ ಬಿಲ್ಲಿನ ಅಸಲು (ಓರಿಜಿನಲ್) ಬಿಲ್ಲುಗಳು ಎಲ್ಲಿವೆ ಎಂದರೆ ಸಾಕ್ಷಿಯು ಪ್ರತಿವಾದಿಗಳ ಕಛೇರಿಗೆ ತಲುಪಿಸಿದ್ದೇನೆ ಎಂದು ಹೇಳುತ್ತಾರೆ. ಸದರಿ ಬಿಲ್ಲುಗಳನ್ನು ಗ್ರಾಮ ಪಂಚಾಯಿತಿಯ ಪಿಡಿಓ ರವರಿಗೆ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಪಿಡಿಓ ರವರ ಹೆಸರು ಹೇಳಲಿಕ್ಕಾಗುವುದಿಲ್ಲ.

21. ನಿಪಿ.22 ರಿಂದ ನಿಪಿ.28 ಎಂದು ಗುರುತಿಸಲಾದ ಬಿಲ್ಲುಗಳಲ್ಲಿ ದಿನಾಂಕ ಹಾಕಿಲ್ಲ ಎಂದರೆ ಸರಿ. ದಿನಾಂಕದ ಸ್ಥಳದಲ್ಲಿ ಖಾಲಿ ಬಿಟ್ಟಿದ್ದಾರೆ ಎಂದರೆ ಸರಿ. ನಾನು ಅಸಲು ಬಿಲ್ಲುಗಳನ್ನು ಪಿಡಿಓ ರವರಿಗೆ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇಂಡೆಂಟ್ ಪ್ರಕಾರ ಯಾವುದೇ ಸಮಾಗ್ರಿಗಳನ್ನು ನಾನು ಪ್ರತಿವಾದಿಗಳಿಗೆ ಸರಬರಾಜು ಮಾಡಿಲ್ಲ ಎನ್ನುವುದು ಸರಿಯಲ್ಲ.

22. ಪ್ರತಿವಾದಿಗಳು ಯಾವತ್ತೂ ಇಂಡೆಂಟ್ ಕೊಟ್ಟು ಸಾಮಾಗ್ರಿಗಳನ್ನು ಕೊಡುವಂತೆ ನನಗೆ ಹೇಳಿಯೇ ಇಲ್ಲ ಎನ್ನುವುದು ಸರಿಯಲ್ಲ.

23. ಪ್ರತಿವಾದಿಗಳ ಕಛೇರಿಯಲ್ಲಿ ವರ್ಷಕ್ಕೊಮ್ಮೆ ಅಂದರೆ ಪ್ರತಿ ಮಾರ್ಚ್ ತಿಂಗಳಿನಲ್ಲಿ ಎಲ್ಲಾ ಬಿಲ್ಲುಗಳನ್ನು ಚುಕ್ತಾ ಮಾಡುತ್ತಾರೆ ಎಂದರೆ ಸಾಕ್ಷಿಯು ನಾನು ಪ್ರತಿವಾದಿ ಗಮನಕ್ಕೆ ನನ್ನ ಬಿಲ್ಲುಗಳು ಬಾಕಿ ಇರುವ ಬಗ್ಗೆ ತಂದಿದ್ದೇನೆ ಎಂದು ಹೇಳುತ್ತಾರೆ.

24. ಗ್ರಾಮ ಪಂಚಾಯಿತಿಯ ಮೇಲಾಧಿಕಾರಿ ತಾಲ್ಲೂಕು ಪಂಚಾಯಿತಿಯ ಕಾರ್ಯ ನಿರ್ವಾಹಣಾಧಿಕಾರಿ ಎಂದರೆ ಸರಿ. ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಣಾಧಿಕಾರಿಯವರ ಮೇಲಾಧಿಕಾರಿ ಜಿಲ್ಲಾ ಪಂಚಾಯತಿಯ ಸಿಇಓ ಆಗಿರುತ್ತಾರೆ ಎಂದರೆ ಸರಿ.

25. ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯಿತಿಯವರ ಕಾರ್ಯ ನಿರ್ವಹಣಾಧಿಕಾಯವರನ್ನು ನಾನು ನನ್ನ ಬಿಲ್ಲು ಬಾಕಿ ಇದ್ದ ಬಗ್ಗೆ ಬೇಟಿ ಆಗಿಲ್ಲ. ಸಾಕ್ಷಿಯು ಮುಂದುವರೆದು ಅವರುಗಳಿಗೆ ನಾನು ಮನವಿ ತಲುಪಿಸಿದ್ದೇನೆ ಎಂದು ಹೇಳುತ್ತಾರೆ. ಸದರಿ ಮನವಿಯನ್ನು ತಲುಪಿಸಿದ್ದರ ಬಗ್ಗೆ ಈ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೇನೆ ಎಂದು ಹೇಳುತ್ತಾರೆ.

26. ತಾಲ್ಲೂಕು ಪಂಚಾಯಿತಿಯವರು ಮತ್ತು ಜಿಲ್ಲಾ ಪಂಚಾಯಿತಿಯವರು ಏನು ಕ್ರಮ ತೆಗೆದುಕೊಂಡಿದ್ದಾರೆಂದು ಈ ನ್ಯಾಯಾಲಯದಲ್ಲಿ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ಸದರಿ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಅಧಿಕಾರಿಗಳನ್ನು ಈ ಪ್ರಕರಣದಲ್ಲಿ ಪಾಟೀಯನ್ನಾಗಿ ಮಾಡಿಲ್ಲ ಎಂದರೆ ಸರಿ.

27. ವಾಯಿದೆ ಮುಗಿದ ಬಿಲ್ಲುಗಳನ್ನು ನಾನು ಸೃಷ್ಟಿಸಿ ಈ ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಜಗಳೂರು ತಾಲ್ಲೂಕಿನ ಮೂರು ಪಂಚಾಯಿತಿ ಕಛೇರಿಗೆ ಸಾಮಾಗ್ರಿಗಳನ್ನು ಕೊಟ್ಟಿರುತ್ತೇನೆ. ಮೂರು ಪಂಚಾಯಿತಿ ಕಛೇರಿಗೂ ಒಂದೇ ಬಿಲ್ಲು ಪುಸ್ತಕ ಇಟ್ಟಿರುತ್ತೇನೆ. ಒಂದೊಂದು ಪಂಚಾಯಿತಿ ಕಛೇರಿಗೂ ಒಂದೊಂದು ಬಿಲ್ ಪುಸ್ತಕ ಇಟ್ಟಿರುವುದಿಲ್ಲ.

28. ದೊಣ್ಣೆಹಳ್ಳಿ ಗ್ರಾಮ ಪಂಚಾಯಿತಿಗೆ ಒಟ್ಟು ಐದು ಬಿಲ್ಲುಗಳನ್ನು ಕೊಟ್ಟಿದ್ದು, ಸದರಿ ಐದು ಬಿಲ್ಲು ಸಂಖ್ಯೆ18, 37, 48, 57 ಬಿಲ್ಲುಗಳು, ಹಾಗೂ ಇನ್ನೊಂದು ಬಿಲ್ಲಿನ ಸಂಖ್ಯೆ ಜ್ಞಾಪಕ ಇರುವುದಿಲ್ಲ. ಸದರಿ ಬಿಲ್ಲುಗಳನ್ನು ಪಿಡಿಓ ರವರಿಗೆ ತಲುಪಿಸಿರುತ್ತೇನೆ. ಪಿಡಿಓ ರವರ ಹೆಸರು ಹೇಳಲ್ಲಿಕಾಗುವುದಿಲ್ಲ.

29. ಪ್ರತಿವಾದಿಗಳಿಂದ ನನಗೆ ಯಾವುದೇ ಬಾಕಿ ಬರಬೇಕಾಗಿದ್ದು ಇಲ್ಲ ಎಂದರೆ ಸರಿಯಲ್ಲ. ನಾನು ಪಂಚಾಯಿತಿಯಿಂದ ಅಂದರೆ ಸರ್ಕಾರಿ ಹಣವನ್ನು ಪಡೆಯಬೇಕೆಂಬ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಈ ಪ್ರಕರಣ ಹೂಡಿದ್ದೇನೆ ಎಂದರೆ ಸರಿಯಲ್ಲ,

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.